**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಸ್ಪೇಷಲ್ ಕೇಸ್ ನಂ.89/2021**

ಫ್ರಾ.ಸಾ. 3

ಚಾ.ಸಾ. 1

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 04.02.2025**

| | |
|---|---|
| ಸಾಕ್ಷಿದಾರರ ಹೆಸರು | ಅರುಣ |
| ಗಂಡನ ಹೆಸರು | ನಾಗರಾಜು |
| ವಯಸ್ಸು | 36 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಎ.ಹುಲ್ಕೆರೆ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಮೃತ ನಾಗರಾಜು ನನ್ನ ಗಂಡ, ನಾವು ಶಿಳ್ಳೆ ಕ್ಯಾತ ಜನಾಂಗಕ್ಕೆ ಸೇರಿದವರು. ಚಾಸಾ.2 ರಿಂದ 5 ರವರು ಗೊತ್ತು. ಚಾಸಾ.7 ರವರು ನನ್ನ ನಾದಿನಿ. ಚಾಸಾ.8 ರಿಂದ 21 ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು. ಅವರು ನಮ್ಮ ಊರಿನವರು. ಅವರು ಒಕ್ಕಲಿಗರು. ಅವರು ಸುಮಾರು 4 ವರ್ಷದ ಹಿಂದೆ 1 ನೇ ಆರೋಪಿ ಮರಕುಯ್ಯಲು ಕರೆದುಕೊಂಡು ಮನೆಯಿಂದ ಹೋದಾಗ ಕೆಳಗ್ಗೆ ಬಿದ್ದು ಮರಣ ಹೊಂದಿದ್ದರು. ನಾನು ಕೂಲಿಗೆ ಹೋಗಿದ್ದೆ ಮದ್ಯಾಹ್ನ 1.30 ಗಂಟೆ ಸಮಯಕ್ಕೆ ಚಾಸಾ.14 ರವರು ನನಗೆ ಪೋನು ಮಾಡಿ ನನ್ನ ಗಂಡನಿಗೆ ಅಪಘಾತವಾಗಿ ಗಾಯಗೊಂಡು ಆಸ್ಪತ್ರೆಗೆ ಸೇರಿಸಿದ್ದಾರೆಂದು ವಿಷಯ ತಿಳಿಸಿದನು. ಆಗ ನಾನು ಮತ್ತು ಚಾಸಾ.7 ರವರು ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಬಂದೆವು. ನನ್ನ ಗಂಡ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅಲ್ಲಿಂದ ಬೆಂಗಳೂರಿನ ನಿಮಾನ್ಸ್ ಗೆ ಕರೆದುಕೊಂಡು ಹೋದರು. ಅಲ್ಲಿ ಒಂಭತ್ತು ದಿವಸ ಒಳರೋಗಿಯಾಗಿದ್ದರು. ಅಲ್ಲಿಂದ ಮಂಡ್ಯ ಆಸ್ಪತ್ರೆಗೆ ಸಾಯಂಕಾಲ ಕರೆದುಕೊಂಡು ಬಂದೆವು. ಮರುದಿವಸ ಬೆಳಗಿನ ಜಾವ 5.00 ಗಂಟೆಗೆ ತೀರಿಕೊಂಡಿದ್ದರು. ನನ್ನ, ನನ್ನ ಅಣ್ಣ, ನಾದಿನಿ ಆಸ್ಪತ್ರೆಯಲ್ಲಿ ನೋಡಿಕೊಂಡಿದ್ದೆವು.

2. ಸಾಕ್ಷಿಗೆ ಈಗ ದೂರು ತೋರಿಸುತ್ತಿದ್ದು ಅದನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಗಿದೆ.

3. ದೂರು ಕೊಟ್ಟ ನಂತರ ಪೊಲೀಸರು ಪಂಚರೊಂದಿಗೆ ನನ್ನ ಗಂಡ ಬಿದ್ದಿದ್ದ ಸ್ಥಳವಾದ ಕಿರಗಂದೂರು ಗ್ರಾಮದಲ್ಲಿರುವ ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ ಹತ್ತಿರ ಬಂದಾಗ ಸ್ಥಳ ನಾನು ತೋರಿಸಿದ್ದು, ಪೊಲೀಸರು ಬೆಳಗ್ಗೆ ಸಮಯದಲ್ಲಿ ಮಹಜರ್ ಮಾಡಿಕೊಂಡು ಪೊಟೋ ತೆಗೆದರು. ಸ್ಥಳ ಮಹಜರ್ ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಗಿದೆ. ಸ್ಥಳದಲ್ಲಿ ತೆಗೆದ ಎರಡು ಪೊಟೋಗಳನ್ನು ಒಟ್ಟಾರೆ ನಿಪಿ.7 ಎಂದು ಗುರುತಿಸಲಾಗಿದೆ.

4. ನಂತರ ಪೊಲೀಸರು ಪಂಚರೊಂದಿಗೆ 1 ನೇ ಆರೋಪಿ ವಾಸದ ಮನೆಯ ಮುಂಭಾಗ ಆರೋಪಿತರು ಜಾತಿ ನಿಂದನೆ ಮಾಡಿದ ಸ್ಥಳ ಎಂದು ನಾನು ತೋರಿಸಿದ ಮೇರೆಗೆ ಪೊಲೀಸರು ಬೆಳಗ್ಗೆ ಸಮಯದಲ್ಲಿ ಮಹಜರ್ ಮಾಡಿಕೊಂಡು ಪೊಟೋ ತೆಗೆದರು. ಸ್ಥಳ ಮಹಜರ್ ನಿಪಿ.8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8 ಎ ಎಂದು ಗುರುತಿಸಲಾಗಿದೆ. ಆ ಸ್ಥಳದಲ್ಲಿ ತೆಗೆದ ಪೊಟೋವನ್ನು ನಿಪಿ.9 ಎಂದು ಗುರುತಿಸಲಾಗಿದೆ.

5. ಮರ ಹತ್ತಲು ನನ್ನ ಗಂಡನಿಗೆ ಯಾವುದೇ ಅನುಕೂಲ, ವ್ಯವಸ್ಥೆ ಮಾಡಿಕೊಟ್ಟಿರಲಿಲ್ಲ, ಹೀಗಾಗಿ ನನ್ನ ಗಂಡ ಸಾವನ್ನಪ್ಪಿರುತ್ತಾರೆ. ನನ್ನ ಗಂಡ ಸಾವಿಗೆ 1 ನೇ ಆರೋಪಿಯೇ ಕಾರಣ ಆಗಿರುತ್ತಾರೆ. ಈ ಎಲ್ಲಾ ವಿಷಯ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿಗಳು ಆಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.